ರಾಜ್ಯದಲ್ಲಿ ಉತ್ಪಾದನೆಯಾಗುವ ಮದ್ಯಹಾಗೂ ರಾಜ್ಯಕ್ಕೆ ಆಮದು ಮಾಡಿಕೊಳ್ಳುವ ಮದ್ಯವನ್ನು ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕವೇ ಮಾರಾಟ ಮಾಡಬೇಕೆಂಬ ನಿರ್ಬಂಧ ವಿಧಿಸಲಾಗಿದೆ.

ನಕಲಿ ಮದ್ಯದ ಮಾರಾಟವನ್ನು ತಡೆಗಟ್ಟಲು ಸನ್ನದು ಮಳಿಗೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಸಿಬ್ಬಂದಿಗೆ ಮದ್ಯದ ಬಾಟೆಲ್‌ಗಳ ಮೇಲೆ ಇರುವ ಭದ್ರತಾ ಚೀಟಿಗಳು ಅಸಲಿಯಾಗಿರುವ ಬಗ್ಗೆ ಪರಿಶೀಲಿಸಲು ಅಗತ್ಯ ಇರುವ ಉಪಕರಣವನ್ನು ನೀಡಲಾಗಿದೆ. ಹಾಗೂ ಅನುಮಾನಾಸ್ಪದವಾಗಿ ಕಂಡು ಬಂದ ಬಾಟೆಲ್‌ಗಳನ್ನು ರಾಸಾಯನಿಕ ಪ್ರಯೋಗಾಲಕ್ಕೆ ವಿಶ್ಲೇಷಣೆಗಾಗಿ ಕಳುಹಿಸಲಾಗುವುದು. ಮತ್ತು ಸದರಿ ಬಾಟೆಲ್ ಯಾವ ಡಿಸ್ಟಿಲರಿಗೆ ಸಂಬಂಧಿಸಿದೆಯೊ ಆ ಡಿಸ್ಟಿಲರಿಯಿಂದ ಸದರಿ ಮದ್ಯ ಉತ್ಪಾದನೆಯಾಗಿರುವ ಬಗ್ಗೆ ಉತ್ಪಾದನಾ ದಿನಾಂಕ ಮತ್ತು ಬ್ಯಾಚ್ ಸಂಖ್ಯೆ ವಿವರಗಳನ್ನು ಪರಿಶೀಲಿಸಲಾಗುವುದು.

ಸನ್ನದು ಮಳಿಗೆಗಳಲ್ಲಿ ನಕಲಿ ಮದ್ಯ ಹೊಂದಿರುವುದು ಕಂಡು ಬಂದಲ್ಲಿ, ಆ ಸನ್ನದನ್ನು ರದ್ದುಪಡಿಸಲು ಅಬಕಾರಿ ಕಾಯ್ದೆ ಕಲಂ 29 ರನ್ವಯ ಕ್ರಮ ಕೈಗೊಳ್ಳಲಾಗುತ್ತದೆ.

ಸನ್ನದುದಾರರಲ್ಲದ ವ್ಯಕ್ತಿಗಳು ನಕಲಿ ಮದ್ಯವನ್ನು ಹೊಂದಿರುವ ಪ್ರಕರಣಗಳಲ್ಲಿ ಅವರನ್ನು ದಸ್ತಗಿರಿ ಮಾಡಿ, ಪೊಲೀಸ್ ಕಸ್ಟಡಿಗೆ ನೀಡಿ ಮುಂದಿನ ತನಿಖಾ ಕ್ರಮ ಕೈಗೊಳಲಾಗುತ್ತದೆ.

ಇ) 2009–ಜುಲೈನಿಂದ 2010–ಜನವರಿವರೆಗೆ ರಾಜ್ಯಾದ್ಯಂತ ಒಟ್ಟು –174 ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಈ) ದಾಖಲಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅಬಕಾರಿ ಕಾಯ್ದೆ ಮತ್ತು ನಿಯಮಗಳನ್ವಯ ತನಿಖೆ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.

**ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮೂಲಭೂತ ಸೌಕರ್ಯ**

**715 (331) ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ)** : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

ಆ) ಯಾವ ಯಾವ ಶಾಲೆಗಳು ಸ್ವಂತ ಕಟ್ಟಡ ಹಾಗೂ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದೆ. (ವಿವರ ನೀಡುವುದು);

ಇ) ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿರಲು ಕಾರಣವೇನು;

ಈ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸರಕಾರಿ ಶಾಲೆಗಳಿಗೆ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :**

ಅ) ವಿಜಾಪುರ ನಗರದಲ್ಲಿ 122 ಸರ್ಕಾರಿ ಪ್ರಾಥಮಿಕ ಶಾಲೆಗಳು, 05 ಸರ್ಕಾರಿ ಪ್ರೌಢ ಶಾಲೆಗಳಿರುತ್ತದೆ.

ಆ) 21 ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆ (ಜಮನಗರ) ಇವುಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ.

ಪ್ರಾಥಮಿಕ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಪ್ರೌಢಶಾಲೆಯು ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆಯುತ್ತಿರುತ್ತದೆ. ಮೇಲ್ಕಂಡ ಶಾಲೆಗಳು ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದೆ. (ವಿವರವನ್ನು ಲಗತ್ತಿಸಿದೆ)

ಇ) ನಿವೇಶನ ಸೌಲಭ್ಯತೆಯ ಕಾರಣದಿಂದಾಗಿ ಈ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಈ) ಸರ್ವ ಶಿಕ್ಷಾ ಅಭಿಯಾನ, ರಾಜ್ಯವಲಯ, ಯೋಜನೆ, ನಬಾರ್ಡ್ ಸಹಾಯಧನ ಆರ್.ಐ.ಡಿ.ಎಫ್ ಯೋಜನೆ ಮತ್ತು ಯೋಜನೇತರದಡಿ ಅನುದಾನ ಒದಗಿಸಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸರಕಾರಿ ಶಾಲೆಗಳಿಗೆ ಕಟ್ಟಡ ಸೇರಿದಂತೆ ಮೂಲಭೂತ ಸೌಲಭ್ಯಗಳು ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.

**ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 33 ಕ್ಕೆ ಅನುಬಂಧ**

**ಬಿಜಾಪುರ ನಗರದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಯಾದಿ**

| ಅ.ನಂ | ಸರ್ಕಾರಿ ಪ್ರಾಥಮಿಕ ಶಾಲೆಗಳ ಹೆಸರು | ಬಾಡಿಗೆ ಮೊತ್ತ |
|---|---|---|
| 1 | ಕೆ.ಬಿ.ಎಸ್. ನಂ.12 | 686 |

| | | |
|---|---|---|
| 2 | ಕೆ.ಬಿ.ಎಸ್. ನಂ.13 | 302 |
| 3 | ಕೆ.ಬಿ.ಎಸ್. ನಂ.15 | 1154 |
| 4 | ಯು.ಬಿ.ಎಸ್. ನಂ.04 | 705 |
| 5 | ಯು.ಬಿ.ಎಸ್. ನಂ.06 | 90 |
| 6 | ಯು.ಬಿ.ಎಸ್. ನಂ.13 | 3921 |
| 7 | ಯು.ಬಿ.ಎಸ್. ನಂ.09 | 1070 |
| 8 | ಯು.ಬಿ.ಎಸ್. ನಂ.10 | 4000 |
| 9 | ಯು.ಬಿ.ಎಸ್. ನಂ.08 | 1720 |
| 10 | ಯು.ಜಿ.ಎಸ್. ನಂ.07 | 9645 |
| 11 | ಯು.ಜಿ.ಎಸ್. ನಂ.06 | 75 |
| 12 | ಯು.ಜಿ.ಎಸ್. ನಂ.03 | 48 |
| 13 | ಯು.ಜಿ.ಎಸ್. ನಂ.11 | 2866 |
| 14 | ಯು.ಜಿ.ಎಸ್. ನಂ.02 | 2004 |
| 15 | ಕೆ.ಬಿ.ಎಸ್. ನಂ.34 | 1995 |
| 16 | ಕೆ.ಬಿ.ಎಸ್. ನಂ.11 | 5200 |
| 17 | ಯು.ಬಿ.ಎಸ್. ನಂ.27 | 1900 |
| 18 | ಯು.ಬಿ.ಎಸ್. ನಂ.21 | 2685 |
| 19 | ಕೆ.ಬಿ.ಎಲ್. ಪಿ.ಎಸ್. ವಿಶ್ವೇಶ್ವರ ನಗರ | 3365 |
| 20 | ಕೆ.ಬಿ.ಎಸ್. ನಂ.57 | 1990 |
| 21 | ಯು.ಬಿ.ಎಸ್. ರಾಜಾಜಿ ನಗರ | 1935 |
| | **ಒಟ್ಟು** | **47356** |

**ಅಬ್ಕಾರಿ ರಕ್ಷಣಾ ಮತ್ತು ಇನ್ಸ್‌ಪೆಕ್ಟರ್‌ಗಳ ಬಡ್ತಿ**

**720 (1404) ಶ್ರೀ ಅಶ್ವಥ್ ಎಂ.ಸಿ. (ಸನ್ನಪಟ್ಟಣ)** : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಕ್ಸೈಜ್ ರಕ್ಷಕ ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಬಡ್ತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;